(vii) ಪ್ರೈಮರಿ ಶಾಲೆಗಳಲ್ಲಿ ಕೈಗೊಂಡಿದ್ದ ಎ. ಎಸ್. ಪಿ. ಕಾರ್ಯಕ್ರಮವನ್ನು ಮುಂದುವರಿಸುವುದು

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಎ. ಎಸ್. ಪಿ. ಮೂಲಕ ರಾಜ್ಯ ಕೆಲವು ಪ್ರೈಮರಿ ಶಾಲೆಗಳಲ್ಲಿ ಬೋರ್‌ವೆಲ್‌ಗಳನ್ನು ತೆಗೆಯಿಸಿ ಮೋಟಾರುಗಳನ್ನು ಅಳವಡಿಸಿ, ಕೈತೋಟಗಳನ್ನು ಮಾಡುವ ಯೋಜನೆ ಇದಾಗಿದ್ದು, ಈಗ ಹಾಲಿ ರಾಜ್ಯದ ಕೆಲವು ಕಡೆ ಬೋರ್‌ವೆಲ್ ತೆಗೆದಿದ್ದು ಕೈ ಪಂಪು ಹಾಕದೆ ಹಾಗೆ ಹಾಳಾಗಿದ್ದು ಮತ್ತೆ ಕೆಲವು ಕಡೆ ಶಾಲೆಗಳಿಗೆ ತೋಡಿಸಿದ್ದ ಎಲೆಕ್ಟ್ರಿಕ್ ಮೋಟಾರುಗಳನ್ನು ಮಾಡಿಕೊಂಡಿರುವ ಪ್ರಕರಣಗಳು ಕೆಲವು ಇದ್ದು ಮತ್ತೆ ಕೆಲವು ಕಡೆ ಮೋಟಾರ್ ಕೆಟ್ಟಿದ್ದು ಅದನ್ನು ರಿಪೇರಿ ಸಹ ಮಾಡಿರುವುದಿಲ್ಲ. ಈ ರೀತಿ ಹಿಂದಿನ ಸರ್ಕಾರ ಮಾಡಿದ ಎ. ಎಸ್. ಪಿ. ಕಾರ್ಯಕ್ರಮ ಸ್ಥಗಿತಗೊಂಡಿದ್ದು ಇದಕ್ಕಾಗಿ ಖರ್ಚು ಮಾಡಿದ ಕೋಟ್ಯಾಂತರ ರೂಪಾಯಿಗಳ ಅಪವ್ಯಯವಾಗಿದೆ. ಆದ್ದರಿಂದ ಹಾಲಿ ಎ. ಎಸ್, ಪಿ. ಕಾರ್ಯಕ್ರಮ ಮುಂದುವರಿಯುತ್ತಿದೆಯೇ ಹೇಗೆ ೫-೬ ವರ್ಷಗಳ ಹಿಂದೆ ಹಾಕಿದ ಬೋರ್‌ವೆಲ್‌ಗಳಿಗೆ ಕೈ ಪಂಪ್ ಅಳವಡಿಸಲು ಸರ್ಕಾರ ಯೋಚಿಸಿದೆಯೆ ? ಕೆಟ್ಟಿರುವ ಎಲೆಕ್ಟ್ರಿಕ್ ಮೋಟಾರ್ ರಿಪೇರಿಯನ್ನು ಸರ್ಕಾರ ಮಾಡಿಸಿ ಕೊಡುವುದೆ. ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ ಈ ಕಾರ್ಯಕ್ರಮದಲ್ಲಿ ಹಾಕಿರುವ ಮೋಟಾರ್ ಇತರ ಬೋರ್‌ವೆಲ್‌ಗಳನ್ನು ಇನ್ನು ಮುಂದಾದರೂ ರಿಪೇರಿ ಮಾಡಿಸಿ ಕೊಡಲು ಸರ್ಕಾರ ಏನಾದರೂ ಯೋಚಿಸಿದೆಯೆ ಎಂಬ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಎಂ. ರಘುಪತಿ.— ಇದು ಉತ್ತಮವಾದ ಕಾರ್ಯಕ್ರಮ ಈ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರಲಾಗುವುದು.

(viii) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಹಸಿರು ಕಾರ್ಡಿಗೆ ವಿತರಣೆ ಮಾಡುವ ಅಕ್ಕಿಯಲ್ಲಿ ಕಲ್ಲು ಮಿಶ್ರಿತವಾಗಿರುವುದು

ಶ್ರೀ ಪಟವಂಕ್ಕಿ ರತ್ನಾಕರ್.— ಮಾನ್ಯ ಅಧ್ಯಕ್ಷರೇ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಹಸಿರು ಕಾರ್ಡಿಗೆ ವಿತರಿಸುವ ಅಕ್ಕಿಯು ಮುಗ್ಗಲಾಗಿದ್ದು, ಹಾಗೂ ಅಕ್ಕಿಯು ಪ್ರಮಾಣದಷ್ಟೆ ಕಲ್ಲು ಮಿಶ್ರಿತವಾಗಿರುವ ಅಕ್ಕಿಯನ್ನು ವಿತರಿಸಲಾಗುತ್ತಿದೆ. ಪ್ರಾಣಿಗಳು ಸಹ ತಿನ್ನಲು ತಿರಸ್ಕರಿಸಬಹುದಾದಂತಹ ಅಕ್ಕಿಯಲ್ಲಿ ದೊಡ್ಡ ದೊಡ್ಡ ಕಲ್ಲುಗಳು ಸಹ ಅಕ್ಕಿ ಮೂಟೆಯಲ್ಲಿ ಕಂಡು ಬಂದಿದೆ. ಈ ರೀತಿಯ ಅಕ್ಕಿಯನ್ನು ಸರ್ಕಾರ ವಿತರಣೆ ಮಾಡುವುದನ್ನು ನೋಡಿದರೆ, ಬಡವರ ಬಗ್ಗೆ ನಿಮಗೆ ಎಂತಹ ತಿರಸ್ಕಾರ ಇದೆ ಎಂದು ಕಂಡು ಬರುತ್ತದೆ. ಹಸಿರು ಕಾರ್ಡಿಗೆ ವಿತರಿಸುವ ಅಕ್ಕಿಯು ಪ್ರಾಣಿಗಳು ಕೂಡಾ ತಿನ್ನಲು ಅಯೋಗ್ಯವಾಗಿದೆ. ಬಡವರ ಬಗ್ಗೆ ಈ ರೀತಿಯ ಕೃತಕ ಔದಾರ್ಯವನ್ನು ಸರ್ಕಾರ ತೋರುವ ಅಗತ್ಯವಾದರೂ ಏನು ? ಅಧ್ಯಕ್ಷರೇ ಸರ್ಕಾರ ವಿತರಿಸಿರುವ ಅಕ್ಕಿಯನ್ನು ತಪ್ಪು ಪರಿಶೀಲನೆಗೆ ಕಳುಹಿಸುತ್ತಿದ್ದೇನೆ. ಈ ಅಕ್ಕಿ ಮನುಷ್ಯರು ತಿನ್ನಲು ಯೋಗ್ಯವೇ ಎಂದು ನೀವೇ ತೀರ್ಮಾನಿಸಿ.

ಶ್ರೀ ಜಿ.ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರ ರಾಜ್ಯಗಳಿಗೆ ಅಕ್ಕಿಯನ್ನು ಗೊತ್ತು ಮಾಡುತ್ತದೆ. ಪಂಜಾಬ್ ಸರ್ಕಾರದವರು ಏನು ಅಕ್ಕಿಯನ್ನು ಸಂಗ್ರಹ ಮಾಡಿದ್ದರು, ಅದು ಕಳಪೆ ಮಟ್ಟದಿಂದ ಕೂಡಿದ್ದು, ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಕಳಪೆ ಅಕ್ಕಿಯನ್ನು ಅಲಾಟ್ ಮಾಡಿದ್ದರು. ಆದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ ಮಾನ್ಯ ಸದಸ್ಯರು ಹೇಳುತ್ತಿರುವುದು ಆಧಾರರಹಿತವಾದುದ್ದು, ದುರುದ್ದೇಶದಿಂದ ಕೂಡಿದ್ದಾದು. ಅವರಲ್ಲಿರತಕ್ಕ ಅಕ್ಕಿಯನ್ನು ಕಳುಹಿಸಿ ಕೊಡಲಿ, ಪರೀಕ್ಷೆ ಮಾಡಿಸಿ, ಕ್ರಮ ತೆಗೆದುಕೊಳ್ಳುತ್ತೇನೆ.

ಪದವೀಪೂರ್ವ ಶಿಕ್ಷಣ ಪಡೆದವರು ಹನ್ನೆರಡು ತಿಂಗಳು ಪ್ರಾಯೋಗಿಕ ಶಿಕ್ಷಣ ಪಡೆಯಬೇಕೆಂದು ಹೊರಡಿಸಿರುವ ಆಜ್ಞೆಯನ್ನು ಪೂರ್ವಾನ್ವಯ ಮಾಡುವುದು.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಅಧ್ಯಕ್ಷರೇ, ಕರ್ನಾಟಕ ಸರಕಾರ ತನ್ನ ಆಜ್ಞೆ ಇಡಿ ಆಸಿ ಡಿಸಿಯಂ ೭೫ ದಿನಾಂಕ ೧೯-೧೧-೭೬ರಲ್ಲಿ ಕಿರಿಯ ಕಾಲೇಜುಗಳಲ್ಲಿ ಶಿಕ್ಷಣ ಪ್ರಥಮ ಮತ್ತು

ಶಿಕ್ಷಣ ದ್ವಿತೀಯ ಐಚ್ಛಿಕ ವಿಷಯವಾಗಿಟ್ಟುಕೊಂಡು ಪಿ.ಯು.ಸಿ. ಪಾಸಾದ ಬಳಿಕ ಐದು ತಿಂಗಳ ವ್ಯಾಯೋಗಿಕ ಶಿಕ್ಷಣ ಪಡೆದವರನ್ನು ಎರಡು ವರ್ಷದ ಬಿ.ಸಿ.ಎಚ್. ತರಬೇತಿಗೆ ತತ್ಸಮಾನ ಅರ್ಹತೆ ಹೊಂದಿರುವರೆಂದೂ, ಪ್ರಾಥಮಿಕ ಶಾಲಾ ಅಧ್ಯಾಪಕರಾಗಲು ಇವರು ಅರ್ಹರೆಂದೂ ಘೋಷಿಸಿದ ಪರಿಣಾಮವಾಗಿ ಸಹಸ್ರಾರು ಜನ ತರಜೇತಿ ಹೊಂದಿದರು. ಹಲವರು ಅಧ್ಯಾಪಕರಾಗಿ ನೇಮಕಗೊಂಡರು. ಆದರೆ ಇತ್ತೀಚೆಗೆ ಸರ್ಕಾರಿ ಇಡಿ ೨೪೯ ಟಿಪ್ಪಿಯು ೮೪ ತಾರೀಖು ೨೯.೧೦.೮೫ರಲ್ಲಿ ದ್ವಿತೀಯ ಪಿ.ಯು.ಸಿ ಪಾಸಾದ ಬಳಿಕ ಹನ್ನೆರಡು ತಿಂಗಳ ಪ್ರಾಯೋಗಿಕ ಶಿಕ್ಷಣ ಪಡೆಯಬೇಕೆಂದು ವಿಧಿಸಿದ್ದರಿಂದ ನಾನು ಈ ಆಜ್ಞೆಯನ್ನು ಪೂರ್ವಾನ್ವಯ ಮಾಡಿದ್ದರಿಂದ ಸಹಸ್ರಾರು ಜನ ಶಿಕ್ಷಣ ಪಡೆದವರಿಗೆ ಅನ್ಯಾಯ ವಾಗಿದೆ. ಹಿಂದೆ ಟಿ.ಸಿ.ಎಚ್. ಒಂದು ವರ್ಷದಿಂದ, ಎರಡು ವರ್ಷಕ್ಕೆ ಏರಿಸಿದಾಗ, ಎಲ್.ಎಲ್.ಬಿ. ಪದವಿಯನ್ನು ಎರಡರಿಂದ ಮೂರು ವರ್ಷಕ್ಕೆ ಹೆಚ್ಚಿಸಿದ್ದಾರೆ. ಇಂತಹ ಆಜ್ಞೆ ಪೂರ್ವಾನ್ವಯ ವಾಗಿಲ್ಲ. ಬರುವ ಶೈಕ್ಷಣಿಕ ವರ್ಷದಿಂದ ರಾಜ್ಯದ ೧೦೦ ಪ್ರೌಢ ಶಾಲೆಗಳಲ್ಲಿ ವೃತ್ತಿಮಾರ್ಗದರ್ಶನ ಶಿಕ್ಷಣ ಆರಂಭಿಸಲಾಗುವುದೆಂದು ಘೋಷಿಸಿದ ಮಾನ್ಯ ಶಿಕ್ಷಣ ಸಚಿವರು ಅಧ್ಯಾಪಕರಿಗೆ ಮಾತ್ರ ಈ ರೀತಿ ಮಂಲತಾಯಿ ಧೋರಣೆ ತೋರುವುದು ಸರಿಯಲ್ಲವಾದ್ದರಿಂದ ಈ ವಿಚಾರದಲ್ಲಿ ತಾ ೨೯.೧೦.೮೫ರ ಆಜ್ಞೆ ಪೂರ್ವಾನ್ವಯವಾಗದಂತೆ ನೋಡಿಕೊಳ್ಳಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—ಅಧ್ಯಕ್ಷರೇ, ಮಲತಾಯಿ ಧೋರಣೆಯ ಪ್ರಶ್ನೆ ಇದಲ್ಲ. ಸರಿಯಾದ ಧೋರಣೆಯನ್ನೇ ನಾವು ಅನುಸರಿಸಿದ್ದೇವೆ. ಪ್ರಾಸ್ಪೆಕ್ಟಿವ್ ಎಫೆಕ್ಟ್‌ಗೆ ಇದನ್ನು ಕೊಟ್ಟಿದ್ದೇವೆ. ಮುಂದಕ್ಕೆ ಪ್ರೀಯೂನಿವರ್ಸಿಟಿ ವಿಭಾಗವನ್ನು ತೆಗೆದುಕೊಳ್ಳುವವರು ಒಂದು ವರ್ಷ ಈ ತರಬೇತಿಯನ್ನು ಪಡೆಯಬೇಕೆನ್ನುವುದು ನಮ್ಮ ನಿಲುವು. ಅದನು ಮುಂದಿನ ವರ್ಷದಿಂದ ಜಾರಿಗೆ ತರುತ್ತೇವೆ. ಈಗ ಓದಿದವರು ಮತ್ತೆ ಹೋಗಲಿ ಎಂಬ ಉದ್ದೇಶದಿಂದಲ್ಲ. ಆ ರೀತಿ ಮಾಡಿಲ್ಲ.

X ಮೈಸೂರು ನಗರದಲ್ಲಿ ನ್ಯಾಯ ಬೆಲೆ ಅಂಗಡಿಗಳನ್ನು ರದ್ದು ಮಾಡಿರುವುದು.

ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ಉಪಾಧ್ಯಕ್ಷರೇ, ಮೈಸೂರು ನಗರದಲ್ಲಿ ನ್ಯಾಯ ಬೆಲೆ ಅಂಗಡಿಗಳನ್ನು ರದ್ದು ಮಾಡಲು ಸರ್ಕಾರ ನಿರ್ಧಾರ ಮಾಡಿರುವುದಾಗಿ ನಾಗರೀಕ ಸರಬರಾಜು ಇಲಾಖೆ ಕಾರ್ಯದರ್ಶಿಯವರು ಸಂತೋಷಲೆ ಕಳಿಸಿದ್ದಾರೆ. ಇದರಿಂದ ಅನೇಕ ನಿರುದ್ಯೋಗಿಗಳಿಗೆ ತೊಂದರೆಯಾಗಲಿದೆ ಮತ್ತು ಸಾರ್ವಜನಿಕರಿಗೂ ತೊಂದರೆಯಾಗಲಿದೆ. ಇದರ ಬಗ್ಗೆ ಸಂಬಂಧಪಟ್ಟ ಸಚಿವರ ಗಮನವನ್ನು ಸೆಳೆಯುತ್ತೇನೆ

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಉಪಾಧ್ಯಕ್ಷರೇ, ೧೯೪೪ರಲ್ಲಿ ಕೆಲವು ಅಗತ್ಯವಸ್ತುಗಳನ್ನು ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ವಿತರಣೆ ಮಾಡುವ ಪದ್ಧತಿ ಜಾರಿಗೆ ಬಂತು. ೪೦ ಸಾವಿರಕ್ಕೆ ಮೇಲ್ಪಟ್ಟಿರುವ ನಗರ ಪ್ರದೇಶಗಳಲ್ಲಿ ಇರುವ ಅಂಗಡಿಗಳು ಇದಕ್ಕೆ ಒಳಪಟ್ಟವು ಅವುಗಳ ಮಾಲೀಕರನ್ನು ಕರೆದು ಅಗತ್ಯವಸ್ತುಗಳ ದುರುಪಯೋಗ ಆಗುತ್ತಿದೆಯೆಂದೂ, ಹೋಲ್ ಸೇಲ್ ರೇಲ್ ಮತ್ತು ರೀಟೆಲ್ ರೇಟ್‌ಗಳ ತಾರತಮ್ಯವೇ ಇಲ್ಲದಂತಾಗುತ್ತಿದೆಯೆಂದು ಹೀಗೆ ಮುಂದಾಗದಂತೆ ನೋಡಿಕೊಳ್ಳಲು ಎಚ್ಚರಿಕೆ ನೀಡಲಾಯಿತು. ಆದರೂ ಸಹ ಅವರು ದಾರಿಗೆ ಬರದಿದ್ದಾಗ ಸಬ್ಸಿಡಿಯನ್ನು ಸಚಿವ ಸಂಪುಟದಲ್ಲಿ ತಂದು ಖಾಸಗಿ ಅಂಗಡಿಗಳನ್ನು ರದ್ದು ಮಾಡಬೇಕೆಂಬ ತೀರ್ಮಾನ ತೆಗೆದುಕೊಳ್ಳಲಾಯಿತು. ಇದಾದ ಮೇಲೆ ಶಾಸಕರು ಮತ್ತು ಜನತಾ ಪ್ರತಿನಿಧಿಗಳೆಲ್ಲರೂ ಖಾಸಗಿ ಅಂಗಡಿಗಳನ್ನು ರದ್ದು ಮಾಡಿದರೆ ತೊಂದರೆಯಾಗುತ್ತದೆಂದೂ ಯಾರ್ಯಾ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೋ ಅಂಥ ಕೆಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಿ. ಎಲ್ಲರ ಮೇಲೂ ಬಹಿಷ್ಕಾರ ಬಳಸುವುದು ಸರಿಯಲ್ಲ ಎಂದು ತಿಳಿಸಿದಾಗ. ಕ್ಯಾಬಿನೆಟ್ ತೀರ್ಮಾನವನ್ನು ಅಷ್ಟಕ್ಕೆ ನಿಲ್ಲಿಸಿ ಸರಿ ಕಂಡು ಬಂದವುಗಳನ್ನು ರದ್ದು ಮಾಡಲ್ಲಿಲ್ಲ. ಆದರೆ ಯಾರು ಉಲ್ಲಂಘನೆ ಮಾಡುತ್ತಾರೋ ಅವರು ಎಷ್ಟೇ ದೊಡ್ಡವರಿರಲಿ ಅವರ ಅಂಗಡಿಗಳನ್ನು ರದ್ದು ಮಾಡಿದೆವು ಎಲ್ಲವನ್ನು ರದ್ದು ಪಡಿಸಲಿಲ್ಲ. ನ್ಯಾಯವಾದವುಗಳನ್ನು ಉಳಿಸಿದ್ದೇವೆ. ಇನ್ನು ಮುಂದೆಯೂ ಹೀಗೇ ಮಾಡುತ್ತೇವೆ.

ಮೈಸೂರಿನಲ್ಲಿ ಖಾಸಗಿ ಅಂಗಡಿಗಳು ಇವೆ. ೧೯೪೪–೪೫ರ ಸರ್ಕ್ಯುಲರ್ ಏನಿದೆ ಅದಕ್ಕೆ ಇನ್ನೂ ಜೀವ ಇದೆ. ಚೆನ್ನಾಗಿ ನಡೆಸುವವರಿಗೆ ಉತ್ತೇಜನವನ್ನೂ ಕೊಡುತ್ತೇವೆ.